**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ದಕ್ಷಿಣ ಕನ್ನಡ, ಮಂಗಳೂರು.**

ಸ್ಪೆಷಲ್ ಕೇಸ್ ನಂಬ್ರ **124/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ರಾಮಯ್ಯ ಶೆಟ್ಟಿ | ಪ್ರಾಸಾಃ 25 |
| ತಂದೆಯ ಹೆಸರು | : | ಸುಂದರ ಶೆಟ್ಟಿ | ಚಾಸಾಃ 80 |
| ಪ್ರಾಯ | : | 66 ವರ್ಷ | **ದಿನಾಂಕಃ 23.11.2024** |
| ಉದ್ಯೋಗ | : | Retd. Administrative Officer, L I C office, Bantwal. | ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ವಾಸಸ್ಥಳ | : | ಮೊಡಂಕಾಪು, ಬಂಟ್ವಾಳ. | |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದಃ

ನಾನು 1985 ರಿಂದ ದಿನಾಂಕಃ 31.07.2018 ರವರೆಗೆ ವಿವಿಧ ಹುದ್ದೆಗಳಲ್ಲಿ ಎಲ್.ಐ.ಸಿ. ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸಿಬಿ ಪೊಲೀಸರು ನಮ್ಮ ಕಛೇರಿಗೆ ದಿನಾಂಕಃ 07.03.2018 ರಂದು ಪತ್ರ ಬರೆದಿದ್ದು, ಅದರಲ್ಲಿ 2ನೇ ಆರೋಪಿಗೆ ಸಂಬಂಧಿಸಿದಂತೆ ಆಕೆಯ ಎಲ್.ಐ.ಸಿ ಪಾಲಿಸಿ ನಂಬ್ರ 626096414 ದರಲ್ಲಿ ದಿನಾಂಕಃ 22.12.2016ರವರೆಗೆ ಎಷ್ಟು ಪ್ರೀಮಿಯಮ್ ಜಮಾ ಆಗಿದೆ, ತಿಂಗಳ ಕಂತು ಎಷ್ಟು ಮತ್ತು ಅದರಲ್ಲಿ ಸಾಲ ಪಡೆದುಕೊಂಡಿದ್ದಾರೆಯೇ ಮತ್ತು ಪಡೆದಿದ್ದಲ್ಲಿ ಎಷ್ಟು ಮರು ಪಾವತಿ ಮಾಡಿರುತ್ತಾರೆ ಎಂಬ ಬಗ್ಗೆ ಮಾಹಿತಿಯನ್ನು ಕೇಳಿರುತ್ತಾರೆ.

3. ಅದರಂತೆ ನಾನು ದಿನಾಂಕಃ 27.03.2018 ರಂದು ಸದರಿ ಮಾಹಿತಿಯನ್ನು ಒದಗಿಸಿರುತ್ತೇನೆ. ಅದರಂತೆ ಸದರಿ ಎಲ್.ಐ.ಸಿ. ಪಾಲಿಸಿಯಲ್ಲಿ ಪಾವತಿಸಿದ ಒಟ್ಟು ಮೊತ್ತ ರೂ.40,000/-, ಅದರ ವಾರ್ಷಿಕ ಪ್ರೀಮಿಯಮ್ ಕಂತು ರೂ.20,000/- ಮತ್ತು 2016ರ ಬಳಿಕ ಯಾವುದೇ ಪ್ರೀಮಿಯಮ್ ಕಟ್ಟಿಲ್ಲ ಮತ್ತು ಅದರ ಮೇಲೆ ಯಾವುದೇ ಸಾಲ ಪಡೆದಿಲ್ಲ ಎಂದು ಮಾಹಿತಿ ನೀಡಿರುತ್ತೇನೆ. ಸದರಿ ಮಾಹಿತಿ ಪತ್ರ ಈಗ ನೋಡುತ್ತಿದ್ದು ಅದನ್ನು ನಿ.ಪಿ.115 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-115(ಎ) ಎಂದು ಗುರುತಿಸಲಾಯಿತು. ನಮ್ಮ ಕಛೇರಿಗೆ ಎ.ಸಿ.ಬಿ. ಪೊಲೀಸರು ನೀಡಿದ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.116 ಎಂದು ಗುರುತಿಸಲಾಯಿತು.

4. ದಿನಾಂಕಃ 19.01.2018 ರಂದು ಪತ್ರ ಬರೆದಿದ್ದು, ಅದರಲ್ಲಿ 2ನೇ ಆರೋಪಿಗೆ ಸಂಬಂಧಿಸಿದಂತೆ ಅದೇ ಪಾಲಿಸಿಯನ್ನು ದಿನಾಂಕಃ 17.01.2014 ರಂದು ಸರಂಡರ್ ಮಾಡಿದ್ದು, ಲೀಲಾವತಿ ಹೆಚ್.ಬಿ. ಯವರಿಗೆ ಎಷ್ಟು ಮೊತ್ತ ಪಾವತಿಯಾಗಿದೆ ಅಂತ ಕೇಳಿರುತ್ತಾರೆ. ಅದರಂತೆ ನಾನು ದಿನಾಂಕಃ 22.01.2018 ರಂದು ಸದರಿ ಮಾಹಿತಿಯನ್ನು ಒದಗಿಸಿದ್ದು, ಅದರಂತೆ ರೂ.34,563/- ಸರಂಡರ್ ವ್ಯಾಲ್ಯು ವನ್ನು ನೆಫ್ಟ್ ಮುಖಾಂತರ ಅವರಿಗೆ ಪಾವತಿಯಾಗಿದೆ ಎಂದು ಮಾಹಿತಿ ಕೊಟ್ಟಿರುತ್ತೇನೆ. ಸದರಿ ಮಾಹಿತಿ ಪತ್ರ ಈಗ ನೋಡುತ್ತಿದ್ದು ಅದನ್ನು ನಿ.ಪಿ.117 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-117(ಎ) ಎಂದು ಗುರುತಿಸಲಾಯಿತು. ನಮ್ಮ ಕಛೇರಿಗೆ ಎ.ಸಿ.ಬಿ. ಪೊಲೀಸರು ನೀಡಿದ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.118 ಎಂದು ಗುರುತಿಸಲಾಯಿತು.

Spl.C.No.124/2020 PW-25
Date: 23.11.2024

ಪಾಟೀ ಸವಾಲುಃ ಆರೋಪಿ ಪರ ಶ್ರೀ ವೈ.ವಿ.ಹೆಚ್. ರವರ ಪರವಾಗಿ ಶ್ರೀ ಎನ್.ಪಿ.ಹೆಚ್. ವಕೀಲರಿಂದಃ

(ಆರೋಪಿ ಪರ ವಕೀಲರು ಈ ಸಾಕ್ಷಿಯ ಪಾಟೀ ಸವಾಲು ಏನೂ ಇಲ್ಲ ಎಂದು ನುಡಿಯುತ್ತಾರೆ.)

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.